# ಕನ್ನಡದ ಕೆಲವು ಶ್ರೇಷ್ಠ ಶತಕಗಳು

○ ಡಾ॥ ಸಿದ್ಧಯ್ಯ ಪುರಾಣಿಕ

ಡಾ॥ ಎಂ. ಚಿದಾನಂದಮೂರ್ತಿ ಗೌರವ ಸಂಪುಟ
'ಸಂಶೋಧನ'ದಲ್ಲಿ ಪ್ರಕಟಗೊಂಡ ಲೇಖನದ ಮೇಲಚ್ಚು

# ಕನ್ನಡದ ಕೆಲವು ಶ್ರೇಷ್ಠ ಶತಕಗಳು

ಡಾ|| ಸಿದ್ಧಯ್ಯ ಪುರಾಣಿಕ

ಕಲಾತ್ಮಕತೆ ಸೃಜನಶೀಲ ಸಾಹಿತ್ಯ ಕೃತಿಗಳ ಹಿರಿಮೆಯು ಹೆಗ್ಗುರುತು. ಅಂತೆಯೇ ಇಂಥ ಕೃತಿಗಳು ಸಾಹಿತ್ಯಜ್ಞರ ಹೆಚ್ಚಿನ ಮೆಚ್ಚುಗೆಗೆ ಪಾತ್ರವಾಗಿರುವುದು ಸ್ವಾಭಾವಿಕ. ಆದರೆ ರುಚಿವೈಚಿತ್ರ್ಯವೆನ್ನುವುದೊಂದಿದೆ. ಸಾಹಿತ್ಯ ಗುಣಗಳ ಸಾಂದ್ರತೆಯಿಂದಲ್ಲದಿದ್ದರೂ ನೀತಿ, ಲೋಕಾನುಭವ, ಹೃದಯಸ್ಪಂದನ, ಮಿಥ್ಯಾಚಾರ ವಿಡಂಬನೆ, ಸ್ವಮತ ಮಂಡನೆ, ಕುಮತ ಖಂಡನೆ ಇತ್ಯಾದಿಗಳಿಂದ ಶತಕ ಸಾಹಿತ್ಯವು ಸಾಹಿತ್ಯಪ್ರಿಯ ಶ್ರೀಸಾಮಾನ್ಯರಿಗೆ ಪ್ರಿಯವಾಗಿರುವುದು ಇದೇ ಕಾರಣದಿಂದಲೇ.

ಸಂಸ್ಕೃತದಲ್ಲಿ ಭರ್ತೃಹರಿಯ ನೀತಿಶತಕ, ಶೃಂಗಾರಶತಕ, ವೈರಾಗ್ಯಶತಕಗಳಿಗೆ, ನ್ಯಾಯಶತಕ, ಸೂರ್ಯಶತಕ, ಜ್ಞಾನಶತಕ, ಅಮರುಕಶತಕ ಮೊದಲಾದುವುಗಳಿಗೆ ದೊರೆತಿರುವ ಪ್ರಾಶಸ್ತ್ಯ ಸರ್ವಜನವಿದಿತ. ಇವುಗಳಿಂದ ಪ್ರೇರಣೆ ಪಡೆದೋ ಏನೋ ಕ್ರಿ.ಶ. ೧೦೭೦ರಲ್ಲಿ ಇದ್ದ ನಾಗವರ್ಮಾಚಾರ್ಯ 'ಚಂದ್ರಚೂಡಾಮಣಿಶತಕ'ವನ್ನು ರಚಿಸಿದ. ಪ್ರಾಯೇಣ ಇದು ಕನ್ನಡದ ಪ್ರಥಮ ಶತಕ. ಕೊಂಡಗುಳಿ ಕೇಶಿರಾಜ (೧೧೨೦)ನ ಷಡಕ್ಷರಕಂದ ಎರಡನೆಯ ಶತಕವೆನಿಸಬಹುದು. ಕವಿಕಾಮ (೧೨೦೦)ನ ಸ್ತನಶತಕವೂ ಉಲ್ಲೇಖನೀಯ.

ಆದರೆ ಕನ್ನಡದಲ್ಲಿಯೇ ಅತ್ಯಂತ ಶ್ರೇಷ್ಠವೆನಿಸುವ ಕೆಲವು ಶತಕಗಳಲ್ಲಿ ಎರಡನ್ನು –ಪಂಪಾಶತಕ, ರಕ್ಷಾಶತಕಗಳನ್ನು–ಬರೆದ ಹಿರಿಮೆ ಹರಿಹರನದು (ಸು. ೧೨೦೦). ಹೊಸತನದ ಹುಡುಕಾಟಕ್ಕೆ ಹೆಸರಾದ ಹಿರಿಯ ಕವಿ ಹರಿಹರ ಹಿಂದಿನ ಚಂಪೂಕಾವ್ಯಗಳಲ್ಲಿ ಅಲ್ಲಿಷ್ಟು ಇಲ್ಲಿಷ್ಟು ಬಳಕೆಯಾಗಿದ್ದ ರಗಳೆಗಳನ್ನು ತನ್ನ ಅಭಿವ್ಯಕ್ತಿ ಮಾಧ್ಯಮವನ್ನಾಗಿ

ಅರಿಸಿಕೊಂಡಂತೆಯೇ, ಅದುವರೆಗೆ ಅಪರೂಪದ ಸಾಹಿತ್ಯ ಪ್ರಕಾರವಾಗಿದ್ದ ಶತಕವನ್ನೂ ತನ್ನ ವೈಯಕ್ತಿಕ ಆಲಾಪ-ವಿಲಾಪಗಳಿಗೆ, ತುಮುಲ-ತುಡಿತಗಳಿಗೆ, ಕನಲಿಕೆ-ಕಾಣ್ಕೆಗಳಿಗೆ ಮಾಧ್ಯಮವನ್ನಾಗಿ ಆಯ್ದುಕೊಂಡುದು ಸಹಜವೇ. ಯಾಕೆಂದರೆ ಶತಕ ಬಹು ಸಾಧ್ಯತೆಗಳನ್ನೊಳಗೊಂಡ ವ್ಯಕ್ತಿನಿಷ್ಠ ಸಾಹಿತ್ಯ ಪ್ರಕಾರ.

ಮುಂದೆ ಹದಿನೈದನೆಯ ಶತಮಾನದ ಕೊನೆಯಲ್ಲಿಯೋ, ಹದಿನೇಳನೆಯ ಶತಮಾನದ ಆರಂಭದಲ್ಲಿಯೋ ಬಂದ ಪುಲಿಗೆರೆಯ ಸೋಮ ತನ್ನ ಅತ್ಯಂತ ಜನಪ್ರಿಯ ಸೋಮೇಶ್ವರಶತಕದಲ್ಲಿ—

ಮತಿಯಂ ಬುದ್ಧಿಯ ಜಾಣ್ಮೆಯಂ ಗಮಕವಂ ಗಾಂಭೀರ್ಯಮಂ ನೀತಿಯಾ
ಯತವಂ ನಿಶ್ಚಲ ಚಿತ್ತಮಂ ನೃಪವರಾಸ್ಥಾನೋಚಿತಾರ್ಥಂಗಳಂ ।
ಅತಿಮಾಧುರ್ಯ ಸುಭಾಷಿತಂಗಳ ಮಹಾ ಸತ್ಕೀರ್ತಿಯಂ ಬಾಳ್ಕೆಯಂ
ಶತಕಾರ್ಥಂ ಕೊಡದಿರ್ಪುದೇ ಹರಹರಾ ಶ್ರೀಚೆನ್ನ ಸೋಮೇಶ್ವರಾ

ಎಂದು ತನಗೆ ತಿಳಿದ ಶತಕದ ಸಾಧ್ಯತೆಗಳನ್ನು ವಿವರಿಸಿ, ಇನ್ನೂ ಹೆಚ್ಚಿನ ಸಾಧ್ಯತೆಗಳತ್ತ ನಮ್ಮ ಗಮನ ಸೆಳೆದರೂ ಹರಿಹರನಿಗೆ ಮಾತ್ರ ಶತಕವೂ ಭಕ್ತಿ ಸಾಧನೆಯ ಮಾಧ್ಯಮ ಮಾತ್ರವಾಯಿತು. ಪಂಪಾವಿರೂಪಾಕ್ಷನಲ್ಲಿ ಅವನು ಪ್ರಾರ್ಥಿಸಿಕೊಂಡದ್ದೂ ಇಷ್ಟನ್ನೇ—

ಸತಿ ಕಾರುಣ್ಯಂ, ಕುಮಾರಂ ಮತಿ, ಸಖನುರು ಸತ್ಯಂ, ಪ್ರಧಾನಂ ವಿವೇಕಂ,
ಸ್ತುತಿ ಭಂಡಾರಂ, ಸುಧರ್ಮಂ ಕರಿ ತುರಗ ರಥಾಖ್ಯಂ, ನಿರಾಶಾ ಸ್ವದೇಶಂ
ಸತತಂ ತಾನಾಗೆ ಶಾಂತಿಸ್ಥಲದೊಳೆಸೆವ ಸದ್ಭಕ್ತಿ ಸಪ್ತಾಂಗ ರಾಜ್ಯ-
ಸ್ಥಿತನಾಗಿರ್ಪಂತೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥ (ರಕ್ಷಾಶತಕ)

ಇದು ಹರಿಹರನ ಭಕ್ತಿದರ್ಶನಕ್ಕೆ ಬರೆದ ಭಾಷ್ಯ. ಆಶಾರಾಹಿತ್ಯವೆಂಬುದೊಂದು ದೇಶ; ಶಾಂತಿಯೆಂಬ ರಾಜಧಾನಿ ಯದಕ್ಕೆ; ಅಲ್ಲಿ ಕಾರುಣ್ಯ ರಾಣಿ, ಮತಿ ಯುವರಾಜ, ವಿವೇಕ ಮಂತ್ರಿ, ಸತ್ಯ ಸಖ, ಸ್ತುತಿ ಭಂಡಾರ, ಸುಧರ್ಮ ಚತುರಂಗ ಬಲ, ಶರಣನೇ ರಾಜ. ಇಂತಿದು ಸದ್ಭಕ್ತಿ ಸಪ್ತಾಂಗ ರಾಜ್ಯ. ಇದರಲ್ಲಿ ಸ್ಥಿತನಾಗಿರಬೇಕೆಂಬುದೇ ಹರಿಹರನ ಹೆಬ್ಬಯಕೆ.

ಪುಷ್ಪದರಗಳೆಯಲ್ಲಿ—

ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿ ಸುಖದಿಂದಧಿಕವಿದಕೆ ಪಡಿಯಿಲ್ಲೆನಿಸಿ
ಪರುಷವಂ ಬಿಸುಡೆಂಬ ಸುರಭಿಯಂ ತೆಗೆಯೆಂಬ
ಸುರ ತರುವನೊಲ್ಲೆಂಬ-ಮೃತವಂ ಚೆಲ್ಲೆಂಬ
ನಿಧಿಗಳಂ ನೂಂಕು ಚಿಂತಾಮಣಿಯನಿಡುಕೆಂಬ

ಹರಿಹರ 'ಉರವಣಿಪ ಪರಮಭಕ್ತಿಯ ಸೊಕ್ಕು ತಲೆಗೇರಿ'ದವ. ಆದರೂ ಅವನು ನಮಗೆ ಹೇಳುವುದು ಸತ್ಯವನ್ನೇ ನೆಮ್ಮಿರೆಂದು :

ಜಗದೊಳಗೆಲ್ಲ ನೋಡುವೊಡೆ ಸತ್ಯಮೆ ತೀವಿ ತುಳುಂಕುತಿರ್ಪುದೈ
ಬಗೆವೊಡೆ ಭಕ್ತನೋರ್ವನದರೊಳ್ ನೆರೆ ಸತ್ಯಮನಾಡಲಾತನೇ ।
ಪಗೆಯೆನಿಸಿರ್ಪುದೇಕಲ ? ಅಸತ್ಯಮೆ ತಾಂ ಪಿರಿದಾಗೆ ! ಅಂತದಂ
ಬಗೆಯದೆ ಸತ್ಯಮಂ ನುಡಿಯುತರ್ಚಿಸುತಿರ್ಪುದು ಹಂಪೆಯಾಳ್ದನಂ ॥

ಸತ್ಯವನ್ನು ನುಡಿಯುವುದು, ಪರಮಾತ್ಮನನ್ನು ಪೂಜಿಸುವುದು—ಇದೇ ಹರಿಹರ ತೋರುವ ಗುರಿ. ಸತ್ಯ-ಭಕ್ತಿ, ಭಕ್ತಿ—ಸತ್ಯ ! 'ಸಾ ತಸ್ಮಿನ್ ಪರಮ ಪ್ರೇಮರೂಪಾ' ಎನ್ನುತ್ತದೆ ನಾರದರ ಭಕ್ತಿಸೂತ್ರ. ಪರಮನ ಬಗ್ಗೆ ಪರಮ ಪ್ರೇಮವೇ ಭಕ್ತಿ. ಆದುದರಿಂದ ಹರಿಹರನ ಸಂದೇಶ ಸತ್ಯ—ಪ್ರೇಮಗಳ ಸಂದೇಶ. ಪ್ರೇಮ ಬೇರೆಯಲ್ಲ. ಅಹಿಂಸೆ ಬೇರೆಯಲ್ಲ. ಪ್ರೇಮವಿದ್ದಲ್ಲಿ ಹಿಂಸೆಗೆಡೆಯೆಲ್ಲಿ ? ಆದುದರಿಂದ ಹರಿಹರನ ಸಂದೇಶ ಸತ್ಯ-ಅಹಿಂಸೆಗಳ ಸಂದೇಶ ವೆಂದೂ ಹೇಳಬಹುದು.

ಹರಿಹರನ ಶತಕಗಳಿಂದ ಮಾದರಿಗಳನ್ನು ಉದಾಹರಿಸ ಹೋಗುವುದು ಅವ್ಯಾಪಾರೇಷು ವ್ಯಾಪಾರವೆನಿಸಬಹುದು. ಈ ಎರಡೂ ಶತಕಗಳಲ್ಲಿ ಅವನ ಭಕ್ತಿ ಭಾಗೀರಥಿ ಒಮ್ಮೆ ಭೋರ್ಗರೆಯುತ್ತ, ಒಮ್ಮೆ ಪ್ರಶಾಂತವಾಗಿ, ಒಮ್ಮೆ ಕಲಕಲ ನಿನಾದ ಗೈಯುತ್ತ, ಒಮ್ಮೆ ಸುಳಿದೆಗೆಯುತ್ತ ಪ್ರವಹಿಸಿದೆ. ಅದರಲ್ಲಿ ಮಿಂದು ಮಡಿಯಾಗಬೇಕು ನಾವು.

ಹರಿಹರನ ಸಮಕಾಲೀನನಲ್ಲದಿದ್ದರೂ ಅವನ ತರುಣದಲ್ಲಿಯೇ ಬಂದ ಪಾಲ್ಕುರಿಕೆ ಸೋಮನಾಥನೂ ವೃಷಾಧಿಪ ಶತಕವನ್ನು ಬರೆದಿದ್ದಾನೆ. ಹಲವು ಭಾಷೆಗಳಲ್ಲಿ ಬರೆದಿರುವ ಈ ಶತಕದಲ್ಲಿ ಕನ್ನಡ ವೃತ್ತಗಳೂ ಇವೆ. ಮುಂದೆ ತೆಲುಗಿನಲ್ಲಿ ಶತಕಗಳ ಸುರಿಮಳೆಯೇ ಸುರಿದು ಸುಮಾರು ಆರುನೂರಕ್ಕೂ ಹೆಚ್ಚು ಶತಕಗಳು ಸೃಷ್ಟಿಯಾದುದನ್ನು ಗಮನಿಸಿದರೆ, ಕನ್ನಡದಲ್ಲಿ ೧೭೦ ಶತಕಗಳು ದೊರಕಿರುವುದನ್ನು ಗಮನಿಸಿದರೆ ಹರಿಹರ ಸೋಮನಾಥರು ಶತಕಗಳನ್ನು ಬರೆದುದು ಸಾರ್ಥಕವಾಯಿತೆಂದು ಹೇಳಬಹುದು.

ಮುಂದೆ ಹದಿನೈದನೆಯ ಶತಮಾನದವರೆಗೆ ಕನ್ನಡದಲ್ಲಿ ಶತಕ ರಚನೆ ಸ್ಥಗಿತಗೊಂಡಿತು. ಈ ಶತಮಾನದ ಎದ್ದು ಕಾಣುವ ಶತಕಕಾರ ಮಗ್ಗೆಯ ಮಾಯಿದೇವ. ಶತಕತ್ರಯವೆಂದೇ ಪ್ರಸಿದ್ಧವಾಗಿರುವ ಅವನ ಶಿವಾಧವ, ಶಿವಾವಲ್ಲಭ, ಐಪುರೀಶ್ವರಶತಕಗಳು ಅನುಕ್ರಮವಾಗಿ ಭಕ್ತಿ—ಜ್ಞಾನ—ವೈರಾಗ್ಯಗಳನ್ನು ಪ್ರತಿಪಾದಿಸುತ್ತವೆ. ಕಾವ್ಯಾಂಶ ಕಡಮೆ, ದರ್ಶನಾಂಶ ಹೆಚ್ಚು. ವೀರಶೈವೇತರರಿಗೆ ಇವು ರುಚಿಸುವುದು ಕಷ್ಟ. ಆದರೂ ವೀರಶೈವ ಸಿದ್ಧಾಂತವನ್ನು ಅದರ ಶುದ್ಧ ಸ್ವರೂಪದಲ್ಲಿ ಅರಿಯಲು ಅಪೇಕ್ಷಿಸುವವರು ಇವುಗಳನ್ನು ಓದುವುದು ವಿಹಿತ. ಅಲ್ಲಲ್ಲಿ ದೃಷ್ಟಾಂತಗಳೂ ರೂಪಕಗಳೂ ಲೋಕೋಕ್ತಿಗಳೂ ಇವುಗಳ ವಾಚನೀಯತೆಯನ್ನು ಹೆಚ್ಚಿಸಿವೆ. ಇಂಥ ಸಾಲುಗಳು ಯಾರಿಗೆ ಬೇಡ ?

ಸುಖಮಂ ಕಾಂಕ್ಷಿಪರ್ಯೆಸೆ ಸರ್ವರುಮನೇಕಾಯಾಸದಿಂ ಯತ್ನದಿಂ—
ದಖಿಲೋಪಾಯದಿನಲ್ಲದೂಹಿಪರೆ ನಾನಾ ಯುಕ್ತಿಯಿಂ ದುಃಖಮಂ ?
ಸುಖಕೆಂದಿಟ್ಟ ಸೊಡರ್ನಿಮಿರ್ದು ಮನೆಯಂ ಸುಟ್ಟಂದದಿಂ ದುಃಖಮಂ
ಸುಖಕಾಮತ್ವದೆ ಮಾಳ್ಪೊಡಂತದು ಭವತ್ ಕೃತ್ಯಂ ಶಿವಾವಲ್ಲಬಾ !

ಬೇಡುವುದೀಗ ಕಾಮವುದು, ಬಾರದುದೇ ಕಡುಗೋಪಮಂತದ—
ಕ್ಕೀಡಹುದೀಗ ಲೋಭವದರಿಂ ಮರೆದಿರ್ಪುದೆ ಮೋಹಮಲ್ಲಿ ಪೊ—
ಕ್ಕಾಡುವುದೀಗ ದುರ್ಮದ ಮದಂ ಬಲಿದಿರ್ಪುದು ತಾನೆ ಮತ್ಸರಂ !
ಬೇಡುವ ಪಾಪಮಿಷ್ಟು—ಪರಮಪ್ರಭುವೇ ಮಹದೈಪುರೀಶ್ವರಾ !

ಇನ್ನು ಹದಿನಾರನೆಯ ಶತಮಾನವು ರತ್ನಾಕರವರ್ಣಿಯ ಶತಮಾನ. ಭರತೇಶವೈಭವವೊಂದೇ ಸಾಕು—ಕನ್ನಡ ಸಾಹಿತ್ಯೇತಿಹಾಸದಲ್ಲಿ ಇವನಿಗೊಂದು ಉನ್ನತ ಸ್ಥಾನ ಸ್ಥಿರಗೊಳಿಸುವುದಕ್ಕೆ. ಇದು ಸಾಲದೆಂದೋ ಏನೋ ಮೂರು ಶತಕ ಗಳನ್ನೂ ಅನೇಕ ಹಾಡುಗಬ್ಬಗಳನ್ನೂ ನಮಗೆ ಕೊಟ್ಟು ಹೋಗಿದ್ದಾನೆ. ಇವುಗಳಲ್ಲಿ ತ್ರಿಲೋಕಶತಕ ಜೈನಬಾಂಧವರಿಗೆ ಮಾತ್ರ ರುಚಿಸುವಂಥದು; ರತ್ನಾಕರಶತಕ, ಅಪರಾಜಿತೇಶ್ವರಶತಕಗಳು ಸರ್ವಜನಾದರಣೀಯವಾದುವುಗಳು.

"ಕವಿತಾ ಶಕ್ತಿಯೆ ಕಲ್ಪವಲ್ಲಿಯದನಾ ಸದ್ಧರ್ಮವೆಂದೆಂಬ ಮೇರುವಿನೊಳ್" ಬಿತ್ತಬೇಕೆಂಬುದು ಇವನ

ಕಾವ್ಯೋದ್ದೇಶವಾದರೂ ಈ 'ಸದ್ಧರ್ಮ' ಅನೇಕ ಕಡೆಗೆ ಸ್ವಮತದ ಸೀಮೋಲ್ಲಂಘನ ಮಾಡಿದ ಸದ್ಧರ್ಮವಾಗಿರುವುದು ಕನ್ನಡಿಗರ ಪುಣ್ಯ. ಜೀವನಾನುಭವ, ಜೀವನ ವಿವೇಕ, ಜೀವ ಕಾರುಣ್ಯಾದಿ ವಿಷಮಗಳು 'ಲಲಿತವಹ ಕನ್ನಡದ ನುಡಿಯಲಿ' ಬೆಡಗು ಬಿನ್ನಾಣಗಳೊಡನೆ ವರ್ಣಿತವಾಗಿವೆ. ಸುಂದರ ಉಪಮೆ, ರೂಪಕ, ಸಾಮತಿ, ಸಾದೃಶ್ಯಾದಿಗಳಿಂದ ಕವಿತೆಗೆ ಕಳೆಯೇರಿದೆ.

"ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧ ಶಿವಲೋಕಾರಾಧ್ಯ ಸರ್ವಜ್ಞಶಂಭು" ಎಂದು ಮೊದಲಾಗುವ ಅವನ ಪ್ರಾರ್ಥನಾ ಪದ್ಯದಲ್ಲಿ ಕಂಡುಬರುವ ಸಮ್ಯಕ್‌ದೃಷ್ಟಿಯೇ ಮುಂದುವರಿದು ಕೆಳಗಣ ಪದ್ಯದಲ್ಲಿ ಹೃದ್ಯವಾಗಿ ಹರಹುಗೊಂಡಿದೆ :

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು, ಸ-
ದ್ಭಾವದೆ ಪೂಜಿಪಾತನೆ ಸಖಂ, ಶ್ರುತಯೋಗಸಮೃದ್ಧನೆನ್ನ ಸಂ-
ಜೀವಕನೆಂಬೆನೇಕಿನಿತು ಪಕ್ಷವಿಡಂಬೆಯ ? ನನ್ನ ಮೆಚ್ಚಿನಾ
ದೇವನ ನಚ್ಚಿದಾಪನೆನಗನ್ಯನೆ ? ಪೇಳಪರಾಜಿತೇಶ್ವರಾ !

"ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ದೆಂ" ಎಂದು ಹೇಳಿಯೇ ಹೊರಟಿರುವ ಈ ಹಿರಿಯ ಕವಿ ತನ್ನೊಳಗನ್ನಾ ಮುಚ್ಚುಮರೆಯಿಲ್ಲದೆ ಬಿಚ್ಚಿ ನಮ್ಮ ಮುಂದೆ ಹರವುತ್ತಾನೆ. ಅಲ್ಲಿ ಕಾಣುವ ಲೋಪದೋಷಗಳನ್ನು ನಮ್ಮಲ್ಲಿಯೂ ನಾವು ಕಂಡುಕೊಳ್ಳುವಂತಾಗುತ್ತದೆ. ತನ್ನ ತಪ್ಪೊಪ್ಪಿಗೆಯಿಂದಲೇ ನಮ್ಮ ತಪ್ಪುಗಳನ್ನು ತಿದ್ದುವ, ತನ್ನ ನ್ಯೂನತೆಗಳ ನೆರವಿಯಿಂದಲೇ, ನೆರವಿನಿಂದಲೇ ನಮ್ಮ ಅರಕೆಗಳನ್ನು ತುಂಬುವ ಈ ಕವಿಯ ಬಗ್ಗೆ ಕೃತಜ್ಞತಾಭಾವ ಉಕ್ಕಿಬರುತ್ತದೆ.

ತಾನು ದೊಡ್ಡ ಶಾಸ್ತ್ರಜ್ಞನಾಗಿದ್ದೂ ಪುಸ್ತಕದ ಶಾಸ್ತ್ರ, ಮಸ್ತಕಕ್ಕೆ ಬಂದರಷ್ಟೇ ಸಾಲದು, ಅದರ ಸತ್ಪರಿಣಾಮಗಳು ಶಾಸ್ತ್ರಿಯಲ್ಲಿ ಗೋಚರಿಸಬೇಕು–ಎಂಬುದನ್ನು ಎಷ್ಟು ಹೃದಯಂಗಮವಾಗಿ ಹೇಳಿದ್ದಾನೆ :

ಶಾಸ್ತ್ರಂಬಂದೊಡೆ ಶಾಂತಿ, ಸ್ಥೈರಣೆ, ನಿಗರ್ವಂ, ನೀತಿ, ಮೆಲ್ಪಾತು, ಮು–
ಕ್ತಿಸ್ತ್ರೀ ಚಿಂತೆ, ನಿಜಾತ್ಮ ಚಿಂತೆ, ನಿಲವೇಳ್ಕಂತಲ್ಲದಾ ಶಾಸ್ತ್ರದಿಂ
ದುಸ್ತ್ರೀ ಚಿಂತನೆ, ದುರ್ಮುಖಂ, ಕಲಹಮುಂ, ಗರ್ವಂ ಮನಂಗೊಂಡೊಡಾ
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ–ಅಪರಾಜಿತೇಶ್ವರಾ !

ಹರಿಹರನಂತೆ ರತ್ನಾಕರವರ್ಣಿಯ ಶತಕದ್ವಯಗಳೂ Sample Surveyಗೆ ಒಗ್ಗುವುದಿಲ್ಲ. ಇವನ್ನು ಆಮೂಲಾಗ್ರ ವಾಗಿಯೇ ಓದಿ ಆನಂದಿಸಬೇಕು. ಆದರೂ ನಾನು ಮೆಚ್ಚಿರುವ ಇನ್ನೊಂದು ಪದ್ಯವನ್ನು ಉದ್ಧರಿಸಿ ಮುಂದೆ ಸಾಗ ಬಹುದು :

ಸಾವಿಂಗಂಜಲದೇಕೆ ? ಸಾವು ಪೆರತೇ ? ಮೆಯ್ದಾಳ್ದಿದರ್ಕಂಜಲಾ
ಸಾವೇಂ ಮಾಣ್ಗುಮೆ ? ಕಾವರುಂಟೆಯಕಟಾ ! ಈ ಜೀವನೇನೆಂದುವುಂ
ಸಾವಂ ಕಂಡವನಲ್ಲವೇ ? ಮರಣವಾಗುಲ್ಮುಂದದೇಂ ಪುಟ್ಟನೆ ?
ನೀವೆನ್ನೊಳ್ನಿಲೆ ಸಾವುದುಂ ಸುಖವಲ್ತೆ-ರತ್ನಾಕರಾಧೀಶ್ವರಾ !

ರತ್ನಾಕರವರ್ಣಿ ಕಾಲವಾದಾಗ ಪುಲಿಗೆರೆಯ ಸೋಮ ಬಾಲನಾಗಿರಬೇಕು. ಕನ್ನಡದ ಅತ್ಯಂತ ಜನಪ್ರಿಯ 'ಸೋಮೇಶ್ವರಶತಕ'ದ ಕರ್ತೃವಾದ ಇವನ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ. ಶತಕದಂಥ ವ್ಯಕ್ತಿನಿಷ್ಠ ಸಾಹಿತ್ಯ ಪ್ರಕಾರದಲ್ಲಿ ವೈಯಕ್ತಿಕ ಜೀವನ ವಿವರಗಳಿಗೆ ಅವಕಾಶವಿದೆಯಾದರೂ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ ನಮ್ಮ ಶತಕಕಾರರು. ಆದರೂ ಶತಕದ ವಿಷಯ ಪರಿಧಿಯನ್ನು ವಿಸ್ತರಿಸಿದ ಕೀರ್ತಿ ಇವನದು. ಈ ಬಗ್ಗೆ ಇರುವ ಇವನ

ಪದ್ಯ ಈ ಮೊದಲೇ ಉದಾಹೃತವಾಗಿದೆ. ಧರ್ಮಪ್ರಧಾನವಾದ ಕನ್ನಡ ಸಾಹಿತ್ಯದಲ್ಲಿ 'ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು ಪೇಳಿದಾ' ಸೋಮ ಒಂದು ದೃಷ್ಟಿಯಿಂದ ಶತಕಸಾಹಿತ್ಯಕ್ಕೆ ಹೊಸ ತಿರುವನ್ನು ಕೊಟ್ಟವನು.

ಇದರಿಂದಾಗಿಯೋ ಏನೋ, ಈ ಶತಕ ಪಂಡಿತ ಪಾಮರರಿಬ್ಬರ ಮೆಚ್ಚುಗೆಗೂ ಪಾತ್ರವಾಗಿದೆ. ಈ ಶತಕದ ಕೆಲವು ಉಕ್ತಿಗಳು ಲೋಕೋಕ್ತಿಗಳಾಗಿ ಜನರ ನಾಲಗೆಗಳ ಮೇಲೆ ನರ್ತಿಸುತ್ತಿರುವಷ್ಟು ಬೇರಾವ ಶತಕದಿಂದಲೂ ಆಗಿಲ್ಲ. ಮಾದರಿಗಾಗಿ ಕೆಲವನ್ನು ಮಾತ್ರ ನಮೂದಿಸಬಹುದು: 'ಸಖರಿಂದುನ್ನತ ವಸ್ತುವೆ ?' 'ಕುಲವೆಣ್ಣಿಂಗೆಣೆಯಾವುದೈ ?, 'ಆಪತ್ತಿನೊಳ್ ಮಣಿದುಂ ನೋಡದ ಬಂಧುವೇಕೆ' 'ತರುಗಳ್ ಜೀವಿಗಳಲ್ಲವೆ ?' 'ಬಡವಂ ಬಲ್ಲಿದನಾಗನೆ ?' 'ಪಲವುಂ ಪಳ್ಳ ಸಮುದ್ರವೈ' 'ಅತಿಕಾಮುರ್ಗತಿ ಹಾನಿಯೈ' 'ಪಗೆಯಂ ಬಾಲಕನೆಂಬರೆ ?' 'ಬಲುಗರ್ವಂ ಕೊಲದಿಪ್ಪುದೆ ?' 'ಯುಗಧರ್ಮಂ ನರರ್ಗಪ್ಪುದೈ' 'ಸನ್ನೆ ಸಾವಿರ ಕಾಲಾಳಿನ ಸತ್ವವೈ' 'ಋಣಭಾರಕ್ಕೆಣೆ ಯಾವುದೈ ?' 'ಮಡಿಯೇ ನಿರ್ಮಲ ಚಿತ್ತವೈ' ಇತ್ಯಾದಿ ಇತ್ಯಾದಿ.

ಈ ಶತಕದ ಪದ್ಯಗಳನ್ನು ಉದ್ಧರಿಸುವುದು ಕರಕಷ್ಟವೇ ಸರಿ. ಯಾಕೆಂದರೆ ಇದಾಗಲೇ ಇವು ಬಹುಜನ ಶ್ರುತವಾಗಿವೆ. ಶ್ರೀಸ್ತುತಿ, ನಿಕೃಷ್ಟತೆ, ವಿಧಿಮಹಿಮೆ, ದುಸ್ಸ್ವಭಾವ, ಧನಪ್ರಶಂಸೆ, ರಾಜನೀತಿ, ಸ್ವಪ್ನ, ವೇಶ್ಯಾಪದ್ಧತಿ, ಪರಸೇವೆ, ಸಾಮಾನ್ಯನೀತಿ, ಜ್ಞಾನಪ್ರಶಂಸೆ-ಇವಿಷ್ಟು ಈ ಶತಕದಲ್ಲಿ ಪ್ರತಿಪಾದಿತವಾದ ವಿಷಯಗಳು. ನಮ್ಮ ಸಾಹಿತ್ಯದಲ್ಲಿ ವಿರಳವಾದ ರಾಜನೀತಿಯನ್ನು ಕುರಿತ ಒಂದೆರಡು ಪದ್ಯಗಳನ್ನು ಅವಲೋಕಿಸೋಣ. :

ಅಣುಮಾತ್ರಂ ಕೊಸರಿಲ್ಲದಾಳ್ದನೆಡೆಯೊಳ್ ಲಂಚಕ್ಕೊಡಂಬಟ್ಟು, ಮಾ–
ರ್ಪಣಮಂ ಕೊಂಡತಿ ವಿತ್ತವಂ ಕೆಡಿಸಿ, ಪೈಶೂನ್ಯೋಕ್ತಿಯಿಂ ದ್ರೋಹಮಂ
ಎಣಿಸುತ್ತೆಲ್ಲರ ಬಾಳ್ಗೆ ನೀರನೆರೆದಾರುಂ ಕಾಣದೇ ಭಕ್ಷಿಪಾ
ಗಣಿಕಂ ಹೆಗ್ಗಣಕಂ ಸಮಂ ಹರಹರಾ ಶ್ರೀ ಚೆನ್ನಸೋಮೇಶ್ವರಾ !

ಸೋಮನ ಕಾಲದ ಗಣಕ ಹೆಗ್ಗಣಗಳಿಗೂ ಇಂದಿನ ಗುಮಾಸ್ತ ಹೆಗ್ಗಣಗಳಿಗೂ ಏನಾದರೂ ಭೇದಕಾಣುತ್ತಿದೆಯೇ? ಎಲ್ಲ ಕಾರ್ಯಾಲಯಗಳಲ್ಲಿ ಈ ಹೆಗ್ಗಣಗಳ ಹಾವಳಿಯೇ ಹಾವಳಿ !

ಇನ್ನು ಆಳುವವರು–ದೊರೆಯಾಗಲಿ, ಮಂತ್ರಿಗಳಾಗಲಿ–ಎಂಥವರು ? ಸೋಮನೇ ಹೇಳಲಿ:

ಪುರ ದುರ್ಗಂಗಳ ಬಲ್ಮೆ ಮಾಡದೆ ಪ್ರಜಾಕ್ಷೋಭಂಗಳಂ ನೋಡದೆ–
ಲ್ಲರು ವಿಶ್ವಾಸಿಗಳೆಂದು ನಂಬಿ ಬಹುದಂ ಪೋದಪ್ಪುದಂ ಕಾಣದಾ–
ತುರದಿಂದುಂಡತಿ ನಿದ್ರೆಗೆಯ್ದು ಮದನಂಗಾಳಾಗಿಹನ್ ಲೋಕದೊಳ್
ದೊರೆಯೇ ಸೊಕ್ಕಿದ ಕೋಣನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ !

ಇಲ್ಲಿ 'ದುರ್ಗ'ದ ಸ್ಥಳದಲ್ಲಿ 'ಗ್ರಾಮ'ವನ್ನೂ 'ದೊರೆ'ಯ ಸ್ಥಳದಲ್ಲಿ 'ಮಂತ್ರಿ'ಯನ್ನೂ ಸೇರಿಸಿದರೆ ಈ ಪದ್ಯ ಇಂದಿಗೂ ಪ್ರಸ್ತುತ. ಇದರರ್ಥ ಈ ಶತಕದಲ್ಲಿ ಬಂದಿರುವುದೆಲ್ಲ ಇಂದಿಗೂ ಪ್ರಸ್ತುತವೆಂದಲ್ಲ. ಶಕುನೇತ್ಯಾದಿ ಹಲವು ವಿಚಾರಗಳು ಹಳೆಯುವಾಗಿವೆ. ಆದರೂ ಇದರ ಓದಿಸಿಕೊಳ್ಳುವ ಗುಣ ಆಶ್ಚರ್ಯಕರವಾದುದು. ಇದು ಕಲಿಯುದವರ ಕಾಮಧೇನು.

ಇಲ್ಲಿ ಉಲ್ಲಿಖಿತವಾಗದ ಶತಕಗಳೆಲ್ಲ 'ಬೂಸಾ' ಶತಕಗಳೇನಲ್ಲ. ಅವುಗಳಲ್ಲಿಯೂ ಗಮನಾರ್ಹ ವಿಚಾರಗಳಿವೆ. ವೃತ್ತ, ಕಂದ, ಷಟ್ಪದಿ, ಸಾಂಗತ್ಯ ಇತ್ಯಾದಿ ಛಂದೋರೂಪಗಳಲ್ಲಿ ನೂರು ಮತ್ತು ನೂರಕ್ಕೂ ಹೆಚ್ಚು ಪದ್ಯಗಳುಳ್ಳ ಅನೇಕ ಶತಕಗಳು ಕೆಲವಾದರೂ ಉತ್ತಮ ಪದ್ಯಗಳನ್ನು ಒಳಗೊಂಡಿವೆ. ಕರ್ತೃಗಳ ಹೆಸರು ಗೊತ್ತಿರುವ, ಗೊತ್ತಿಲ್ಲದಿರುವ ಅನೇಕ ಶತಕಕಾರರು ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಜಾಣ, ಗುಣರತ್ನ, ಚೂಡಾ

ರತ್ನ, ಸರಸ್ವತೀ ಮಣಿಹಾರ, ವರಕವಿಚಂದ್ರ, ವಿಗದ್ಧ ಲಲಾಮ, ಸುಜನ ಮನೋಜ ಇತ್ಯಾದಿ ಅಜ್ಞಾತ ಕರ್ತೃಕ ಶತಕ ಗಳೂ ವೀರಭದ್ರರಾಜ(೧೫೨೦)ನ ಐದು ಶತಕಗಳೂ ಕನಕದಾಸ ವಿರಚಿತ 'ಹರಿಭಕ್ತಸಾರ'ವೂ ಚಿಕುಪಾಧ್ಯಾಯ (೧೬೭೨)ನ ನಾಲ್ಕು ಸಾಂಗತ್ಯ ಶತಕಗಳೂ ಚಂದ್ರಕವಿ(೧೪೩೫)ಯ ಶಂಕರಶತಕ, ಗುಮ್ಮಟಾರ್ಯ(೧೫೦೦)ನ ಅರ್ಧೇಂದುಮೌಳಿಶತಕ, ಸಿರಿನಾಮಧೇಯ(೧೫೫೦)ನ ಮಲ್ಲೇಶ್ವರಶತಕ, ಶಂಕರದೇವ(೧೬೨೦)ನ ಶಿವಮಹಿಮಾ ಶತಕ, ಹಿರಿಯೂರು ರಂಗ(೧೬೫೦)ನ ಪಂಪಾವಿರೂಪಾಕ್ಷಶತಕ, ಲಕ್ಷ್ಮಯ್ಯ(ಸು. ೧೭೦೦)ನ ಪಶ್ಚಿಮ ರಂಗಧಾಮ ಶತಕ, ರಾಮಚಂದ್ರಕವಿಯ ಮಲ್ಲಿಕಾರ್ಜುನಶತಕ, ಶಾಂತವೃಷಭೇಶ್ವರನ ಅನುಭವಶತಕ, ಕೇಶವ(೧೭೫೦)ನ ಪಂಚ ಶತಕಗುಚ್ಛ ತಿರುವೇಂಗಡಾಚಾರ್ಯಶತಕ, ಚೆನ್ನರಾಜಪ್ಪನ ವೆಂಕಟೇಶ್ವರಶತಕ, ಯೋಗಾನಂದನ ವಿರೂಪಾಕ್ಷಶತಕ ಮತ್ತು ಬಸವಶತಕ, ನಿರಂಜನಾರ್ಯನ ನಂಜುಂಡಶತಕ, ಶಾಲ್ಯದ ಕೃಷ್ಣರಾಜನ ಸದಾಶಿವಶತಕ, ವಿರಕ್ತ ತೋಂಟ ದಾರ್ಯ(೧೫೬೦)ರ ನಿರಂಜನಲಿಂಗಶತಕ, ಮುಮ್ಮಡಿ ಕೃಷ್ಣರಾಜ ಒಡೆಯರ ಪಾರ್ವತೀ ಭಕ್ತಿಸಾರ ಮತ್ತು ಸಿರಿ ನಂಜುಂಡಶತಕಗಳು, ಗುರುನಂಜೇಸ್ವಾಮಿ (೧೬೩೦) ಸಂಕಲಿಸಿರುವ ೨೫ ಶತಕಗಳು—ಇನ್ನೂ ಅನೇಕ ಶತಕಗಳು ಸಿಕ್ಕಿವೆ. ಇವುಗಳನ್ನೆಲ್ಲ ಸಂಪಾದಿಸಿ ಆಸ್ವಾದಿಸುವುದು ಸಾಮಾನ್ಯರಿಗೆ ಸಾಧ್ಯವಲ್ಲದ ಸಂಗತಿ. ಯಾರಾದರೂ ಈ ಎಲ್ಲ ಶತಕಗಳಿಂದ ಒಂದುಸಾವಿರ ಉತ್ತಮೋತ್ತಮ ಪದ್ಯಗಳನ್ನು ಸಂಗ್ರಹಿಸಿ 'ಕನ್ನಡ ಶತಕ ಸಾಹಿತ್ಯಸಾರ ಸಂಗ್ರಹ' ಎಂದು ಹೆಸರಿಟ್ಟು ಪ್ರಕಟಿಸಿದರೆ ಕನ್ನಡ ಜನತೆಗೆ ಒಂದು ತವನಿಧಿಯನ್ನೇ ಕೊಟ್ಟಂತಾದೀತು.